ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ನಿತ್ಯವೂ ಯಮದೇವನನ್ನೇ ಪೂಜಿಸುತ್ತಾ ಬಂದರೆ ನಮ್ಮ ಪ್ರಾಣವನ್ನು ಒಯ್ಯುವುದಿಲ್ಲವೇ?*




ಬಾ ಪರಮಭಕ್ತ ಎನ್ನುತ್ತಾ ಇನ್ನೂ ಬೇಗ ಕರೆದುಕೊಳ್ಳುತ್ತಾನೆ!

ಮಂಜುಳ ಸಿದ್ಧರಾಜು, ಭದ್ರಾವತಿ
*ರಾಜಕೀಯ ಸೇರಲು ಐಎಎಸ್, ಐಪಿಎಸ್ ತರಹದ್ದೊಂದು ವಿದ್ಯಾರ್ಹತೆ ಕಡ್ಡಾಯವಾದರೆ?*
ಆ ವಿದ್ಯಾರ್ಹತೆಯ ನಕಲಿ ಸರ್ಟಿಫಿಕೇಟ್‌ಗಳಿಗೆ ಒಳ್ಳೆಯ ರೇಟ್ ಸಿಗುತ್ತದೆ!

ಶಿವಮೊಗ್ಗ ರಮೇಶ್, ಮೈಸೂರು
*ಮಾನವೀಯತೆಯ ದೃಷ್ಟಿಯಿಂದ ಮಾಜಿ ಮು.ಮಂ.ಅನ್ನು ಭೇಟಿಯಾದೆನೆಂದ ಮಠಾಧೀಶರು ಇತರ ಖೈದಿಗಳನ್ನೂ ಅದೇ ದೃಷ್ಟಿಯಿಂದ ಏಕೆ ಭೇಟಿಯಾಗಲಿಲ್ಲ?*
ಹ್ಹ! ಕೋಮು, ದೇಣಿಗೆಗಳ ಹಂಗು ಮಠಾಧೀಶರನ್ನೂ ಬಿಡಲಿಲ್ಲವೆಂಬುದೊಂದೇ ಸತ್ಯ.

ಎಸ್.ಜಿ. ಕರನಂದಿ, ಹುನಗುಂದ
*ಅಡ್ವಾಣಿಯವರ ರಥಯಾತ್ರೆಗೂ, ಶ್ರವಣಕುಮಾರ ಕೈಗೊಂಡ ತೀರ್ಥಯಾತ್ರೆಗೂ ಇರುವ ವ್ಯತ್ಯಾಸವೇನು ಸ್ವಾಮಿ?*



ಶ್ರವಣನಿಗೆ ಎಲೆಕ್ಷನ್ ಗೆಲ್ಲುವ ತುರ್ತು ಇರಲಿಲ್ಲ!

ಲ್ಯಾಂಡ್‌ಬ್ಯಾಂಕ್ ಚಂದ್ರಕುಮಾರ್, ಬೆಂಗಳೂರು
*ಕಥೆ, ಚಿತ್ರಕಥೆ, ಸಂಭಾಷಣೆ, ಗೀತೆಗಳು ರೆಡಿ ಇವೆ. ನಿರ್ಮಾಪಕರಾಗುವಿರಾ?*
ಖಂಡಿತ. ಆದರೆ ಎರಡೇ ಷರತ್ತು – ನಿಮ್ಮ ಬ್ಯಾಂಕ್‌ನದೇ ಸಾಲ, ನೀವೇ ಷೂರಿಟಿ ಆಗಬೇಕಷ್ಟೆ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ದೀಪಾವಳಿಯಲ್ಲಿ ಇತ್ತೀಚೆಗೆ ಬೆಳಕಿಗಿಂತ ಶಬ್ದವೇ ಹೆಚ್ಚುತ್ತಿರುವ ಕಾರಣ?*
ಬಹಳ ಮಂದಿ ಅದು Deep ಹಾವಳಿ ಹಬ್ಬ ಎಂದುಕೊಂಡಿದ್ದಾರಂತೆ!

ಲಕ್ಷ್ಮಿ ಎಸ್. ಮೆಳ್ಳಿಗೇರಿ, ಜತ್ತ
*ಚೌತಿಯ ಚಂದ್ರನನ್ನು ನೋಡಿದರೆ ಅಶುಭವೆ?*
ಆ ವಿಘ್ನವಿನಾಶಕನಾದ ಗಣಪತಿಗೆ ಮಾತ್ರ!

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ
*ಜೈಲಿಗೆ ದಾಖಲಾಗುವ ಮುಖಂಡರು ಜಯದೇವ, ವಿಕ್ಟೋರಿಯಾ ಆಸ್ಪತ್ರೆಗಳ ಬದಲು ಮಾನಸಿಕ ಆಸ್ಪತ್ರೆಗೆ ಏಕೆ ಹೋಗುವುದಿಲ್ಲ?*
ಅವರ ಮಾನಸಿಕ ಸ್ಥಿತಿಯ ಬಗ್ಗೆ ಬೇರೆ ಸರ್ಟಿಫಿಕೇಟ್ ಬೇಕಿಲ್ಲ.

ನರಸಿಂಹ ಎಂ. ಪೈ, ಕಾಸರಕೋಡ
*ಮಾನವನ ಆಯಸ್ಸು ಕೇವಲ 50 ವರ್ಷಗಳಿಗೆ ಸೀಮಿತವಾಗಿದ್ದಿದ್ದರೆ...?*
ಹೆಚ್ಚು ಹೆಚ್ಚು ಕ್ರಿಮೆಟೋರಿಯಂಗಳು ಬೇಕಾಗುತ್ತಿದ್ದವು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ನೆಂಟರ ಮನೆಗೆ ಹೋಗಬೇಕು, ಅಲ್ಲಿಯೇ ಇರಬಾರದು ಎಂಬುದನ್ನು ರಾಜಕೀಯಕ್ಕೆ ಹೋಲಿಸಿದರೆ?*
ಸದನಕ್ಕೆ ಹೋಗಬೇಕು, ಕೂಡಲೆ ಸಭಾತ್ಯಾಗ ಮಾಡಬೇಕು!

ದೇಶವಳ್ಳಿ ಶಿವು, ದೇಶವಳ್ಳಿ
*ಪರಪ್ಪನ ಅಗ್ರಹಾರದ ಜೈಲಿಗೆ ಹೊಸದೊಂದು ಹೆಸರಿಡುವುದಾದರೆ...?*
ಎಡ್ಯೂ–ರಪ್ಪನ ಅಗ್ರಹಾರ!

ಡಿ.ಕೆ. ರಾಜ್, ಗದಗ
*ನಿಮ್ಮ ಪತ್ರಿಕೆಗೆ ಹುಡುಗಿಯ ಹೆಸರೇಕೆ?*
ಹೆಚ್ಚು ಜನ ಸ್ಟಡಿ ಮಾಡಲು ಆಸಕ್ತಿ ತೋರಲೆಂದು!

ಮನೋರಮಾ ಪ್ರಭು, ಕಾಸರಕೋಡ
*ಮಕ್ಕಳಿರಲವ್ವ ಮನೆ ತುಂಬ ಇಂದು ಏಕೆ ಬದಲಾಗಿದೆ?*
ಈಗಲೂ ಅದೇ ಆದರೆ ಹೋಂ ತುಂಬ ಬದಲಿಗೆ ಪ್ಲೆಹೋಂ ತುಂಬ ಎಂಬುದಷ್ಟೇ ವ್ಯತ್ಯಾಸ!

ಹೆಚ್.ಸಿ. ಭಾಗ್ಯಕುಮಾರ್, ಬೆಂಗಳೂರು
*ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಕೋಟಿ ರೂಪಾಯಿಯಂತೆ. ಆಫೀಸಿನಲ್ಲಿದ್ದರೆ?*
ಆ ಫೀಸಿಗೆ ತಕ್ಕಷ್ಟು!

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹೆಂಗಸರು ದೇವಸ್ಥಾನದ ಪೂಜಾರಿಣಿ ಆಗಿಲ್ಲ, ಹೆಣ ಹೊರುತ್ತಿಲ್ಲ; ಸಮಾನತೆ ಎಲ್ಲಿದೆ?*
ಇವರು ಹೆತ್ತಿಲ್ಲ, ಅವರು ಹೊತ್ತಿಲ್ಲ ಬಿಡಿ; ಇನ್ನು ಪೂಜಾರಿಣಿಯ ಬಗ್ಗೆ – ನಿತ್ಯವೂ ತೀರ್ಥ ಸೇವಿಸಿದ ಪತಿದೇವರಿಗೆ ಮಂಗಳಾರತಿ, ಸಹಸ್ರನಾಮಾರ್ಚನೆ ಮಾಡುತ್ತಾಳಲ್ಲಾ...

ಪಿ.ಜೆ. ರಾಘವೇಂದ್ರ, ಮೈಸೂರು
*ರಾಜಕಾರಣಿಗಳೆಲ್ಲಾ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡರೆ...?*
ಅವರ ಮಕ್ಕಳ ಸೈನ್ಯ ಸಾಮೂಹಿಕವಾಗಿ ರಾಜಕೀಯಕ್ಕೆ ಧುಮುಕುತ್ತದೆ!

ಬಿ.ಹೆಚ್. ಮಾನಗೆ, ಹೊನ್ನಾವರ
*ಮೊಬೈಲ್ ಟವರ್‌ಗಳು ಏಕೆ ಹಾನಿಕಾರಕ?*
ಜನರಲ್ಲಿ ಮಾತಿಗೆ ಮಾತು ಬೆಳೆಸೋ ಚಾಳಿ ಬೆಳೆಸುವುದರಿಂದ!

ಎಸ್.ಎ. ಮೋಹನರಾಜು, ಶಿವಮೊಗ್ಗ
*ಸೀರೆ ಮಹಿಳೆಯರಿಗೆ ಶೋಭೆ; ಜೀನ್ಸ್, ಚೂಡಿದಾರ್ ಯಾರಿಗೆ ಶೋಭೆ?*



ಟಾಪ್ ಕ್ಲಾಸ್ ಹುಡುಗಿಯರಿಗೆ!

ಹಾಡ್ಯ ಜಯಾನಂದ, ಮೈಸೂರು
*ಮಣ್ಣ ತಿಂದು ಸಿಹಿ ಹಣ್ಣ ಕೊಡುತ್ತದೆ ಮರ. ರಾಜಕಾರಣಿಗಳು?*
ಹಣ್ಣು, ಕಾಯಿ, ಗೊರಟೆ, ತೊಟ್ಟು, ಎಲೆ, ಕಾಂಡ, ಬೇರು, ಮಣ್ಣು ಎಲ್ಲವನ್ನೂ ತಿನ್ನುತ್ತಾರೆ, ನೀಡಿದವರಿಗೆ ಕೈ ಕೊಡುತ್ತಾರೆ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಸಣ್ಣ ಸಣ್ಣ ಮಾತಿಗೂ ತವರಿಗೆ ಹೋಗ್ತೀನಿ ಅಂತ ಹೆಂಡತಿ ಹೆದರಿಸಿದರೆ ಗಂಡನಾದವನು ಏನು ಮಾಡಬೇಕು?*
ಮನೆ ಅಳಿಯ ಆಗಿಬಿಡಲಿ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಮಿ.ರಾಮ್, ಕರುನಾಡು ಕತ್ತಲೆಯ ನಾಡಾಗುತ್ತಿದೆಯಲ್ಲಾ?*
'early to bed, early to rise' ಆಗಿ healthy, wealthy, wise ಆಗಲೆಂದು!

■ ರಾಮ್